# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಿತ್ತೂರ.

ಸಿ.ಸಿ.ಸಂಖ್ಯೆ 560/2018

| | | |
|---|---|---|
| ಸಾಕ್ಷಿದಾರರ ಹೆಸರು | ಇಮ್ರಾನ ಡಿ | ಸಿ.ಡಬ್ಲ್ಯೂ 17 |
| ತಂದೆಯ ಹೆಸರು | ದಾದಾಪಿರ | ಪಿ.ಡಬ್ಲ್ಯೂ 11 |
| ವಯಸ್ಸು | 37 ವರ್ಷ | |
| ಉದ್ಯೋಗ | ಸರ್ಕಾರಿ ನೌಕರ | |
| ವಾಸಸ್ಥಳ | ಚಿಕ್ಕೋಡಿ | |

ಪ್ರಮಾಣ ವಚನ ಬೋಧಿಸಲಾಯಿತು.

ದಿಃ 09.07.2026

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇದೆ. ನಾನು ಯಾವುದೇ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ದಿನಾಂಕ 25.03.2017 ರಲ್ಲಿ ಮೃತ ವ್ಯಕ್ತಿ ನಮಗೆ ಹೇಳದೇ ಕೇಳದೆ ಲೈನ್ ಕ್ಲಿಯರೆನ್ಸ ಇಲ್ಲದೇ ಕೆಲಸ ಮಾಡಲು ಹೋಗಿರುತ್ತಾರೆ. ಆದ್ದರಿಂದ ಅಪಘಾತ ಸಂಭವಿಸಿರುತ್ತದೆ.

**(ಈ ಸಂದರ್ಭದಲ್ಲಿ ಸ.ಸ.ಅ. ರವರ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

ದಿಃ 27.03.2017 ರಂದು ಪೊಲೀಸರ ಮುಂದೆ ಹೇಳಿದ ಹೇಳಿಕೆಯನ್ನು ಸಾಕ್ಷಿಗೆ ಓದಿ ಹೇಳಿ ಕೇಳಲಾಗಿ ಅದರಲ್ಲಿ ಬರೆದಿರುವಂತೆ, ದಿನಾಂಕ 25.03.2017 ರಂದು ಗುತ್ತಿಗೆ ಹಿಡಿದ ಆರೋಪಿತರು ನಮಗೆ ಮತ್ತು ನಮ್ಮ ಸಿಬ್ಬಂದಿಗಳಿಗೆ ಯಾವುದೇ ಮಾಹಿತಿ ತಿಳಿಸದೇ ಹಾಗೂ ವಿದ್ಯುತ್ ಲೈನನ ಮಾರ್ಗಮುಕ್ತತೆ ಪಡೆದುಕೊಳ್ಳದೇ ಮಾರ್ಗನಕೊಪ್ಪ ಗ್ರಾಮದ ಹದ್ದಿಯಲ್ಲಿ ಸಂಜೆ 06.10 ಗಂಟೆಗೆ ನಿಷ್ಕಾಳಜೀತನದಿಂದ ಕೂಲಿ ಕೆಲಸ ಮಾಡುವ ಮೃತ ವ್ಯಕ್ತಿ ಜೀವದ ಸಂರಕ್ಷಣೆಯ ಬಗ್ಗೆ ಯಾವುದೇ ಮುಂಜಾಗ್ರತೆ ಕ್ರಮ ಕೈಗೊಳ್ಳದೇ ವಿದ್ಯುತ್ ಕಂಬದ ಮೇಲೆ ಹತ್ತಿ ವಾಯರ್ ಎಳೆಯುವಾಗ ವಿದ್ಯುತ್ ತಗುಲಿ ತೀರಿಕೊಂಡಿರುತ್ತಾನೆ ಎಂದರೆ ಸರಿ.

**ಪಾಟೀ ಸವಾಲುಃಆರೋಪಿ ಪರಃಶ್ರೀ ಎಮ್ ಎಸ್ ಎಸ್ ವಕೀಲರಿಂದಃ–**

ನಾನು ಸ್ಥಳದಲ್ಲಿ ಹಾಜರು ಇರಲಿಲ್ಲ. ಸದರಿ ವಿಚಾರವನ್ನು ಕ್ಯಾಂಪ್ ಲೈನಮೆನ್ ವೀರಭದ್ರ ಹಿರೇಮಠ (ಚಾಸಾ–18) ಅವರು ಕರೆ ಮೂಲಕ ನನಗೆ ತಿಳಿಸಿರುತ್ತಾರೆ. ಸದರಿ ವಿಚಾರವನ್ನು ಪೋಲಿಸರ ಮುಂದೆ ಹೇಳಿಲ್ಲ.

ಯಾರ ನಿರ್ಲಕ್ಷತನದಿಂದ ಘಟನೆಯಾಗಿದೆ ಎಂದು ಹೇಳಲು ಬರುವುದಿಲ್ಲ.

**(ಮರು ವಿಚಾರಣೆ ಇಲ್ಲ.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಕಿತ್ತೂರ.